## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆಃ 491/2023

**ಸಾಕ್ಷಿಯನ್ನು ದಿಃ 15.12.2025 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಲೀಲಾವತಿ | ಸಿಡಬ್ಲ್ಯೂಃ 3 | ಪಿಡಬ್ಲ್ಯೂಃ 3 |
| ಗಂಡನ ಹೆಸರು | ಕುಮಾರ | | |
| ವಯಸ್ಸು | 43 ವರ್ಷ | | |
| ಕೆಲಸ | ಗೃಹಿಣಿ | | |
| ವಾಸಸ್ಥಳ | ಕಲ್ಲುಣಿಕೆ | | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ಚಾಸಾ-1 ನನ್ನ ಮಾವ. ಚಾಸಾ-2 ನನ್ನ ಗಂಡ. ಚಾಸಾ-4 ಗೊತ್ತು. ಆರೋಪಿತರು ಗೊತ್ತು. ಅವರು ನನ್ನ ಊರಿನವರು. ದಿನಾಂಕಃ 03.07.2023ರಂದು ಸಂಜೆ 4.15 ಸಮಯದಲ್ಲಿ ನನ್ನ ಗಂಡ ಚಾಸಾ-2 ರವರು ಕಲ್ಲುಣಿಕೆ ಸರ್ಕಲ್ ನಲ್ಲಿ 1ನೇ ಆರೋಪಿಯ ಬಳಿ ಹೊಲದ ವಿಚಾರದಲ್ಲಿ ಮಾತನಾಡಿದ್ದರು. ಆಗ 2ನೇ ಆರೋಪಿ ಏಕಾ ಏಕಿ ಬಂದು ಚಾಸಾ-2ರವರನ್ನು ಹಿಡಿದುಕೊಂಡು ಕೈಯಿಂದ ಚಾಸಾ-2 ರವರ ಭುಜ ಮತ್ತು ಎದೆಗೆ ಹೊಡೆದರು. 3ನೇ ಆರೋಪಿ ಕಲ್ಲಿನಿಂದ ಚಾಸಾ-2 ರವರಿಗೆ ತಲೆಗೆ ಮತ್ತು ಎಡ ಭುಜಕ್ಕೆ ಹೊಡೆದರು. ಈ ವಿಷಯವನ್ನು ನನಗೆ ಯಾರೋ ಬಂದು ಹೇಳಿದರು. ನಾನು ಹೋಗುವಷ್ಟರಲ್ಲಿ ಆರೋಪಿತರು ಚಾಸಾ-2 ರವರಿಗೆ ಹೊಡೆದಿದ್ದರು. ನಾನು ಮತ್ತು ಚಾಸಾ-4 ರವರು ಗಲಾಟೆಯನ್ನು ಬಿಡಿಸಿ ಸಮಾಧಾನ ಮಾಡಿದರು. ನಾನು ಚಾಸಾ-2 ರವರನ್ನು ಹುಣಸೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆ. ಈ ಬಗ್ಗೆ ನಾನು ಪೋಲೀಸರ ಮುಂದೆ ಹೇಳಿಕೆ ನೀಡಿದ್ದೇನೆ. ಆರೋಪಿತರು ಚಾಸಾ-2 ರವರಿಗೆ ಹೊಡೆಯಲು ಉಪಯೋಗಿಸಿದ ಕಲ್ಲನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮು.ಮಾ-1 ರ ಕಲ್ಲನ್ನು ನೋಡಿ ಗುರುತಿಸುತ್ತಾರೆ. ನಾನು ಗಲಾಟೆಯನ್ನು ಪ್ರತ್ಯಕ್ಷವಾಗಿ ನೋಡಿದ್ದೇನೆ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

**<u>ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ</u>**

ಆರೋಪಿತರು ಚಾಸಾ-2 ರವರಿಗೆ ಬೋಳಿಮಗನೇ ಎಂದು ಕೆಟ್ಟದಾಗಿ ಬೈಯುತ್ತಿದ್ದರು ಎಂದರೆ ಸರಿ. ಗಲಾಟೆಯಾಗುವ ಸಮಯದಲ್ಲಿ 1ನೇ ಆರೋಪಿ ಚಾಸಾ-2 ರವರನ್ನು ತಬ್ಬಿ ಹಿಡಿದುಕೊಂಡಿದ್ದರು ಎಂದರೆ ಸರಿ.

**<u>ಪಾಟೀ ಸವಾಲುಃ</u> ಆರೋಪಿತರ ಪರ ಶ್ರೀ. SSG ವಕೀಲರಿಂದಃ**

ಘಟನೆ ನಡೆಯಿತು ಎನ್ನಲಾದ ಸಮಯದಲ್ಲಿ ನಾನು ಮನೆಯಲ್ಲಿದ್ದೆ ಎಂದರೆ ಸರಿ. ನಾನು ಘಟನೆಯನ್ನು ಕಣ್ಣಾರೆ ನೋಡಿಲ್ಲ ಎಂದರೆ ನೋಡಿದ್ದೇನೆ. ನಾನು ನೋಡಿದಾಗ 1ನೇ ಆರೋಪಿ ಚಾಸಾ-2 ರವರನ್ನು ಹಿಂದಿನಿಂದ ಹಿಡಿದುಕೊಂಡಿದ್ದರು. 2ನೇ ಆರೋಪಿ ಚಾಸಾ-2 ರವರಿಗೆ ಹೊಡೆಯುತ್ತಿದ್ದರು. ಚಾಸಾ-2 ರವರು ಯಾವ ದಿಕ್ಕಿಗೆ ಮುಖ ಮಾಡಿಕೊಂಡಿದ್ದರು ಎಂದು ನಮಗೆ ಹೇಳಲಾಗುವುದಿಲ್ಲ. 1ನೇ ಆರೋಪಿ ಚಾಸಾ-2 ರವರನ್ನು ತಬ್ಬಿ ಹಿಡಿದುಕೊಂಡಿರಲಿಲ್ಲ ಮತ್ತು 2ನೇ ಆರೋಪಿ ಚಾಸಾ-2 ರವರಿಗೆ ಹೊಡೆಯುತ್ತಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಚಾಸಾ-2 ರವರಿಗೆ ಬೋಳಿ ಮಗನೇ ಎಂದು ಬೈದಿಲ್ಲ ಎಂದರೆ ಸರಿಯಲ್ಲ. ಮು.ಮಾ-1ರ ಕಲ್ಲನ್ನು ಈ ಕೇಸಿನ ಸಂಬಂಧ ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ನನ್ನ ಮಾವ ಹಾಗೂ ಚಾಸಾ-2 ನನ್ನ ಗಂಡನಾಗಿರುವ ಕಾರಣ ನಾನು ಘಟನೆಯನ್ನು ನೋಡದೇ ಇದ್ದರೂ ಸಹ ಚಾಸಾ-1 ರವರ ಮಾತು ಕೇಳಿ ಘಟನೆ ನೋಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬಂದಾಗ ಮು.ಮಾ-1ರ ಕಲ್ಲು 3ನೇ ಆರೋಪಿಯ ಕೈಯಲ್ಲಿ ಇತ್ತು. 3ನೇ ಆರೋಪಿ ಕಲ್ಲಿನಿಂದ ಚಾಸಾ-2 ರವರ ತಲೆಯ ಎಡಭಾಗಕ್ಕೆ ಮತ್ತು ಎಡಭುಜಕ್ಕೆ ಹೊಡೆದರು. 3ನೇ ಆರೋಪಿ ಅಲ್ಲಿಯೇ ಬಿದಿದ್ದ ಕಲ್ಲನ್ನು ಎತ್ತಿಕೊಂಡು ಹೊಡೆದರು. ಒಂದು ಕಲ್ಲಿನಿಂದ ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಗೆ ಹೊಡೆದರೆ ಸದರಿ ಕಲ್ಲು ವ್ಯಕ್ತಿಯ ದೇಹದ ಒಂದು ಭಾಗಕ್ಕೆ ಮಾತ್ರ ಬೀಳುತ್ತದೆ ಎಂದರೆ ಸರಿ. ನ್ಯಾಯಾಲಯದ ಮುಂದೆ ಇರುವುದು ಒಂದೇ ಕಲ್ಲು ಎಂದರೆ ಸರಿ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.